ಶಾಸಕ ಹ್ಯಾರಿಸ್ ಪುತ್ರ ಮೊಹಮದ್ ನಲಪಾಡ್ ವಿರುದ್ಧದ ಪ್ರಕರಣ • ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ

‘ನಿರ್ಭಯಾ ಪ್ರಕರಣದ ಭೀಕರತೆ ಇದರಲ್ಲಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ವತ್ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಜೈಲು ಸೇರಿರುವ ಶಾಸಕ ಎನ್.ಎ. ಹ್ಯಾರಿಸ್ ಪುತ್ರ ಮೊಹಮದ್ ನಲಪಾಡ್ ಹಾಗೂ ಆತನ ಸಹಚರರ ಜಾಮೀನು ಅರ್ಜಿ ಸಂಬಂಧ 63ನೇ ಸೆಷನ್ಸ್ ನ್ಯಾಯಾಲಯ ಸೋಮವಾರ ವಾದ-ಪ್ರತಿವಾದ ಆಲಿಸಿತು. ಪ್ರಕರಣದ ವಿಚಾರಣೆಯನ್ನು ಮಂಗಳವಾರಕ್ಕೆ (ಫೆ.27) ಮುಂದೂಡಿತು.

ಮಧ್ಯಾಹ್ನ 3 ಗಂಟೆಗೆ ನ್ಯಾಯಾಧೀಶರಾದ ಪರಮೇಶ್ವರ್ ಪ್ರಸನ್ನ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡರು. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್‌ಪಿಪಿ) ಎಂ.ಎಸ್.ಶ್ಯಾಮಸುಂದರ್ ಜಾಮೀನು ರದ್ದು ಮಾಡುವಂತೆ ಕೋರಿ 7 ಪುಟಗಳ ಆಕ್ಷೇಪಣಾ ಅರ್ಜಿಯನ್ನು ಸಲ್ಲಿಸಿದರು. ಅದನ್ನು ಪರಿಶೀಲಿಸಿದ ನ್ಯಾಯಾಧೀಶರು, ಆಕ್ಷೇಪಣೆ ಮೇಲೆ ವಾದ ಮಂಡಿಸಲು ನಲಪಾಡ್ ಪರ ವಕೀಲ ಟಾಮಿ ಸೆಬಾಸ್ಟಿಯನ್‌ಗೆ ಅವಕಾಶ ನೀಡಿದರು.

‘ವೈಯಕ್ತಿಕ ದ್ವೇಷದಿಂದ ಉದ್ದೇಶಪೂರ್ವಕವಾಗಿ ಈ ಘಟನೆ ಸಂಭವಿಸಿಲ್ಲ. ಅದಕ್ಕೆ ಪುರಾವೆಯೂ ಇಲ್ಲ. ಆರೋಪಿಗಳ ಪೈಕಿ ಇಬ್ಬರಿಗೆ ಗಾಯಗಳಾಗಿವೆ. ಪ್ರಕರಣ ದಾಖಲಿಸಲು ವಿಳಂಬ ಮಾಡಿದ್ದಕ್ಕೆ ಇನ್‌ಸ್ಪೆಕ್ಟರ್ ಅವರನ್ನೇ ಅಮಾನತು ಮಾಡಿಸಲಾಗಿದೆ. ಇದರಿಂದಲೇ ನಲಪಾಡ್ ತಂದೆ ಶಾಸಕ ಹ್ಯಾರಿಸ್‌ಗಿಂತ ವಿದ್ವತ್ ತಂದೆ ಲೋಕನಾಥನ್ ಅವರೇ ಹೆಚ್ಚು ಪ್ರಭಾವಿ ಎಂಬುದು ತಿಳಿಯುತ್ತದೆ. ಹೀಗಾಗಿ, ನನ್ನ ಕಕ್ಷಿದಾರರಿಗೆ ಜಾಮೀನು ಮಂಜೂರು ಮಾಡಬೇಕು’ ಎಂದು ಟಾಮಿ ಸೆಬಾಸ್ಟಿಯನ್ ಕೋರಿದರು.

ಅದಕ್ಕೆ ಶ್ಯಾಮಸುಂದರ್, ‘ದೆಹಲಿಯಲ್ಲಿ ನಡೆದಿದ್ದ ನಿರ್ಭಯಾ ಪ್ರಕರಣದ ಭೀಕರತೆ ಈ ಪ್ರಕರಣದಲ್ಲಿ ಇದೆ. ಅದೇ ಕಾರಣಕ್ಕೆ ದೇಶದಾದ್ಯಂತ ಈ ಪ್ರಕರಣ ಸುದ್ದಿಯಾಗಿದೆ. ದುಡ್ಡಿದ್ದ ಮಾತ್ರಕ್ಕೆ ಹೇಗೆ ಬೇಕಾದರೂ ವರ್ತಿಸಬಹುದು ಎಂದು ಆರೋಪಿಗಳು ತಿಳಿದುಕೊಂಡಿದ್ದಾರೆ. ಅವರಿಗೆ ಕೋರ್ಟ್ ಆದೇಶ ಪಾಠ ಆಗಬೇಕು. ಹೀಗಾಗಿ, ಜಾಮಿನು ಅರ್ಜಿಯನ್ನು ತಿರಸ್ಕರಿಸಬೇಕು’ ಎಂದು ಮನವಿ ಮಾಡಿದರು.

ವಿದ್ವತ್ ಆರೋಗ್ಯ ಸ್ಥಿತಿ ಬಗ್ಗೆ ನ್ಯಾಯಾಲಯಕ್ಕೆ ವಿವರಿಸಿದ ಶ್ಯಾಮಸುಂದರ್, ಆರೋಪಿಗಳಿಗೆ ಜಾಮೀನು ನೀಡಿದರೆ ಎದುರಾಗುವ ಪರಿಣಾಮಗಳನ್ನು ವಿವರಿಸಿದರು.

ಆರೋಪಿಗಳ ಪರ ವಕೀಲರು, ‘ಎಲ್ಲ ಆರೋಪಿಗಳ ಪರವಾಗಿ ಪ್ರತ್ಯೇಕವಾಗಿ ಜಾಮೀನು ಅರ್ಜಿ ಸಲ್ಲಿಸಿದ್ದೇವೆ. ಎಸ್‌ಪಿಪಿ ಅವರ ಆಕ್ಷೇಪಣೆಗೆ ಪ್ರತಿವಾದ ಮಂಡಿಸಲು ಕಾಲಾವಕಾಶ ಬೇಕು’ ಎಂದು ಕೋರಿದರು. ಆಗ ನ್ಯಾಯಾಧೀಶರು ವಿಚಾರಣೆಯನ್ನು ಮುಂದೂಡಿದರು.

ನಲಪಾಡ್ ಸಹಚರ ನೀಡಿದ ದೂರು ಹಾಸ್ಯಾಸ್ಪದ: ವಿದ್ವತ್ ವಿರುದ್ಧ ನಲಪಾಡ್ ಸಹಚರ ಅರುಣ್ ಬಾಬು ಪೊಲೀಸರಿಗೆ ನೀಡಿದ್ದ ದೂರು ಓದಿದ ಶ್ಯಾಮಸುಂದರ್, ‘ಇದರಲ್ಲಿ ನಂಬಲು ಅಸಾಧ್ಯವಾದ ಶಬ್ದಗಳಿವೆ. ಇದು ಹಾಸ್ಯಾಸ್ಪದವೂ ಆಗಿದೆ’ ಎಂದು ನಕ್ಕರು.

‘ಫರ್ಜಿ ಕೆಫೆಗೆ ನಾನು, ಶಬ್ಬಿ ಹಾಗೂ ನಫಿ ಹೋಗಿದ್ದೆವು. ಅಲ್ಲಿ ವಿದ್ವತ್ ತನ್ನ ಸ್ನೇಹಿತರ ಜತೆ ಮದ್ಯ ಸೇವಿಸುತ್ತಾ ದಾರಿಗೆ ಅಡ್ಡವಾಗಿ ಕಾಲು ಇಟ್ಟುಕೊಂಡು ಕುಳಿತಿದ್ದ, ಕಾಲು ತೆಗೆಯುವಂತೆ ಹೇಳಿದ್ದೆವು. ಅದಕ್ಕೆ ಆತ ನಿರಾಕರಿಸಿದ್ದ. ಈ ಸಂಬಂಧ ಇಬ್ಬರ ನಡುವೆ ಮಾತಿನ ಚಕಮಕಿ ಉಂಟಾಗಿತ್ತು. ಆಗ ವಿದ್ವತ್, ‘ನಾನು ಯಾರು ಗೊತ್ತಾ, ನನ್ನ ತಂದೆ ಲೋಕನಾಥನ್ ಹೆಸರು ಕೇಳಿದ್ದೀಯಾ. ನನ್ನ ಜತೆ ಕಿರಿಕ್ ಮಾಡಿದರೆ ನಿನ್ನನ್ನು ಮಕಾಡೆ ಮಲಗಿಸಿ ಬಿಡುತ್ತೇನೆ’ ಎಂದು ಬೆದರಿಕೆ ಹಾಕಿ ಗುರಾಯಿಸಿದ್ದ. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಉದ್ದೇಶಪೂರ್ವಕವಾಗಿ ನನ್ನ ಕಪಾಳಕ್ಕೆ ಜೋರಾಗಿ ಹೊಡೆದು ನೋವು ಉಂಟು ಮಾಡಿದ. ಆಗ ಉಂಟಾದ ತಳ್ಳಾಟದಲ್ಲಿ ಆತನೇ ಮಕಾಡೆ ಮಲಗಿ ಗಾಯ ಮಾಡಿಕೊಂಡಿದ್ದಾನೆ ಎಂದು ದೂರಿನಲ್ಲಿ ಅರುಣ್ ಹೇಳಿದ್ದಾನೆ’ ಎಂದು ಶ್ಯಾಮಸುಂದರ ವಿವರಿಸಿದರು.

‘ದೂರಿನಲ್ಲಿ ಮಕಾಡೆ ಎಂಬ ಪದವಿದೆ. ಮಕಾಡೆ ಎಂದರೆ ಏನು ಎಂಬುದು ನನಗೆ ಗೊತ್ತಿಲ್ಲ. ದೂರು ದಾಖಲಿಸಿಕೊಂಡ ಪೊಲೀಸರನ್ನೇ ಆ ಬಗ್ಗೆ ಕೇಳಬೇಕು’ ಎಂದು ಶ್ಯಾಮಸುಂದರ್ ಹೇಳುತ್ತಿದ್ದಂತೆ ನ್ಯಾಯಾಲಯದಲ್ಲಿ ನೆರೆದಿದ್ದವರೆಲ್ಲ ನಕ್ಕರು.

ಆ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಆರೋಪಿ ಪರ ವಕೀಲ ಬಾಲನ್, ‘ಪ್ರಕರಣವನ್ನು ವೈಭವೀಕರಿಸಿ ಹೇಳುತ್ತಿರುವ ಈ ವಾದ ನಾಟಕೀಯದಂತಿದೆ. ಇಂಥ ವಾದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ’ ಎಂದರು. ಶ್ಯಾಮಸುಂದರ್, ‘ಈ ವಾದ ನಾಟಕೀಯ ಎಂದು ಅನ್ನಿಸಿದರೆ, ಹಾಗೇ ಸ್ವೀಕರಿಸಿ’ ಎಂದರು.

ಕಿಕ್ಕಿರಿದು ತುಂಬಿದ್ದ ನ್ಯಾಯಾಲಯ: ಪ್ರಕರಣದಲ್ಲಿ ಆರೋಪಿಗಳಿಗೆ ಜಾಮೀನು ಸಿಗುವ ಬಗ್ಗೆ ವಕೀಲರಲ್ಲೂ ಕುತೂಹಲವಿದೆ. ಜತೆಗೆ ವಾದ-ಪ್ರತಿವಾದ ಹೇಗೆ ನಡೆಯುತ್ತದೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿಯೇ ಸೋಮವಾರ ಹೆಚ್ಚಿನ ಸಂಖ್ಯೆಯಲ್ಲಿ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದರು. ಕೆಲವೇ ಆಸನಗಳಿದ್ದರಿಂದ ಬಹುಪಾಲು ವಕೀಲರು, ಕಲಾಪ ಮುಗಿಯುವರೆಗೂ ನಿಂತುಕೊಂಡೇ ಕಲಾಪ ವೀಕ್ಷಿಸಿದರು.

ವಿಚಾರಣೆ ಆರಂಭವಾದಾಗ ಮಾಧ್ಯಮದವರನ್ನು ನ್ಯಾಯಾಲಯದ ಒಳಗೆ ಬಿಟ್ಟಿರಲಿಲ್ಲ. ಅರ್ಧ ಗಂಟೆಯ ಬಳಿಕ ಮಾಧ್ಯಮದ ಕೆಲ ಮಂದಿಯನ್ನಷ್ಟೇ ಒಳಗೆ ಬಿಡಲಾಯಿತು. ಗಂಟೆಯ ಬಳಿಕ ಮತ್ತಷ್ಟು ಮಾಧ್ಯಮದವರು ಒಳಗೆ ಬಂದರು. ಕಿಕ್ಕಿರಿದು ಸೇರಿದ್ದ ವಕೀಲರ ಸಮ್ಮುಖದಲ್ಲೇ ನ್ಯಾಯಾಧೀಶರು, ಕಲಾಪ ನಡೆಸಿದರು.

> ನಿರ್ಭಯಾ ಪ್ರಕರಣಕ್ಕೂ ಇದಕ್ಕೂ ಏನು ಸಂಬಂಧ. ಪ್ರಕರಣವನ್ನು ವೈಭವೀಕರಿಸಲು ಎಸ್‌ಪಿಪಿ ಅವರು ಇದನ್ನು ಸೃಷ್ಟಿ ಮಾಡಿದ್ದಾರೆ
>
> **ಟಾಮಿ ಸೆಬಾಸ್ಟಿಯನ್**

> ಮೊಹಮದ್ ನಲಪಾಡ್ ನೇತೃತ್ವದಲ್ಲಿ ಹಲ್ಲೆ ನಡೆದಿದೆ. ಇದರಿಂದ ಸಾರ್ವಜನಿಕರೂ ಭಯಗೊಂಡಿದ್ದಾರೆ. ಆರೋಪಿಗಳು ಜಾಮೀನಿಗೆ ಅರ್ಹರಲ್ಲ
>
> **ಎಂ.ಎಸ್.ಶ್ಯಾಮಸುಂದರ್**

‘ನನ್ನ ನೇಮಕ ಪ್ರಭಾವ ಬೀರಿದ್ದು ಎನ್ನುತ್ತಾರೆ’

‘ನನ್ನನ್ನು ಎಸ್‌ಪಿಪಿ ಎಂದು ನೇಮಿಸಿದ್ದೇ ಪ್ರಭಾವ ಬೀರಿ ಎನ್ನುತ್ತಾರೆ. ಆದರೆ, ನನಗೇ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಬೆದರಿಕೆ ಇತ್ತು’ ಎಂದು ಶ್ಯಾಮಸುಂದರ್ ಹೇಳಿದರು.

‘ನನಗೆ ಬೆದರಿಕೆ ಇರುವುದರಿಂದ, ಮನೆ ಮತ್ತು ಕಚೇರಿ ಮುಂದೆ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಈ ಬೆದರಿಕೆ ಹಿಂದೆ ಯಾರಿದ್ದಾರೆ ಹಾಗೂ ಯಾರು ಪ್ರಭಾವಿಗಳು ಎಂಬುದು ಗೊತ್ತಾಗುತ್ತದೆ. ನನಗೆ ಬೆದರಿಕೆ ಹಾಕಿದವರು ವಿದ್ವತ್ ಮೇಲೂ ಮತ್ತೆ ಹಲ್ಲೆ ಮಾಡಿ ಬೆದರಿಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ’ ಎಂದರು.

ವಾದ

ಟಾಮಿ ಸೆಬಾಸ್ಟಿಯನ್
ನಲಪಾಡ್ ಪರ ವಕೀಲ

- ಗಾಯಾಳು ಪರ ನೀಡಿದ್ದ 10 ಸಾಲುಗಳ ದೂರಿಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ 10 ಸಾವಿರ ಸಾಲುಗಳ ಆಕ್ಷೇಪಣೆ ಸಲ್ಲಿಸಿದ್ದಾರೆ.
- ವಿದ್ವತ್‌ಗೆ ಆದ ಗಾಯಗಳ ಬಗ್ಗೆ ವಿವರವಾದ ಮಾಹಿತಿಯೂ ಅದರಲ್ಲಿ ಇಲ್ಲ
- ಪ್ರಚೋದನೆ ನೀಡಿದವರು ಯಾರೆಂಬುದನ್ನು ಉಲ್ಲೇಖಿಸಿಲ್ಲ.
- ಉದ್ದೇಶಪೂರ್ವಕವಾಗಿ ಹಲ್ಲೆ ನಡೆದಿದೆ ಎಂಬುದಕ್ಕೆ ಪುರಾವೆಗಳಿಲ್ಲ. ರಾಜಕೀಯ ಪ್ರೇರಿತವಾಗಿ ಈ ಹಂತಕ್ಕೆ ಪ್ರಕರಣ ತಲುಪಿದೆ
- ವಿದ್ವತ್ ಚೇತರಿಸಿಕೊಂಡಿದ್ದಾರೆ. ಹೀಗಾಗಿ, ವಾರ್ಡ್‌ಗೆ ಸ್ಥಳಾಂತರಿಸಲಾಗಿದೆ.
- ಕೆಳಗೆ ಬಿದ್ದಿದ್ದರಿಂದ ಮುಖದ ಮೇಲೆ ಗಾಯ ಆಗಿರಬಹುದು
- ಪ್ರಕರಣ ಸಂಬಂಧ ಪ್ರತಿ ದೂರು ಸಹ ನೀಡಲಾಗಿದೆ.
- ಅಪಘಾತವನ್ನು ಮಾಡಿದವರು ಗಾಯಾಳುವನ್ನು ಆಸ್ಪತ್ರೆಗೆ ಸೇರಿಸುತ್ತಾರೆ. ಅದೇ ರೀತಿ ವಿದ್ವತ್‌ನನ್ನು ನೋಡಲೆಂದು ಆರೋಪಿಗಳು ಮಲ್ಯ ಆಸ್ಪತ್ರೆಗೆ ಹೋಗಿದ್ದರು. ಅದರಲ್ಲಿ ತಪ್ಪೇನಿದೆ?
- ಎಫ್‌ಐಆರ್ ದಾಖಲಿಸುವಾಗ ಇರದ ಕೊಲೆಗೆ ಯತ್ನ (ಐಪಿಸಿ 307) ಆರೋಪವನ್ನು ಕೆಲ ದಿನಗಳು ಬಿಟ್ಟು ಸೇರಿಸಿದ್ದು ಸರಿಯಲ್ಲ
- ಒಂದು ವಾರದೊಳಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ ಆಗಿರುವುದು ಇತಿಹಾಸದಲ್ಲೇ ಇದೇ ಮೊದಲು.
- ನಕ್ಕಲ್ ರಿಂಗ್‌ನಲ್ಲಿ ಹೊಡೆದಿದ್ದರೆ ಪೊಲೀಸರು ಅದನ್ನು ಜಪ್ತಿ ಮಾಡಬೇಕಿತ್ತು. ಆ ರಿಂಗ್ ಎಸ್‌ಪಿಪಿ ಅವರ ಸೃಷ್ಟಿ.

ಪ್ರತಿ ವಾದ

ಎಂ.ಎಸ್. ಶ್ಯಾಮ್‌ಸುಂದರ್
ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್

- ಯಾವುದೇ ದಯೆ ದಾಕ್ಷಿಣ್ಯ ಇಲ್ಲದೆ ಆರೋಪಿಗಳು ಹಲ್ಲೆ ಮಾಡಿದ್ದಾರೆ. 10ರಿಂದ 15 ಮಂದಿ ಸೇರಿ ಒಂದಲ್ಲ, ಎರಡಲ್ಲ, ನೂರಾರು ಏಟು ಹೊಡೆದಿದ್ದಾರೆ.
- ಹಲ್ಲೆಗೆ ಬಾಟಲಿ, ನಕ್ಕಲ್ ರಿಂಗ್, ಐಸ್ ಬಕೆಟ್ ಬಳಸಿದ್ದಾರೆ. ಹಲ್ಲೆ ಮಾಡುವ ಉದ್ದೇಶವಿಲ್ಲದಿದ್ದರೆ ಜೇಬಿನಲ್ಲಿ ನಕ್ಕಲ್ ರಿಂಗ್ ಇಟ್ಟುಕೊಂಡು ಓಡಾಡುವ ಅಗತ್ಯವೇನಿತ್ತು? ಅದು ಹಲ್ಲೆಗೆಂದೇ ಇಟ್ಟುಕೊಂಡಿದ್ದ ಅಸ್ತ್ರವಿದ್ದಂತೆ.
- ಸಾವಿಗೆ ಕಾರಣವಾಗುವಷ್ಟು ರೀತಿಯಲ್ಲಿ ಈ ಹಲ್ಲೆ ನಡೆದಿದೆ.
- ಕೊಲೆಯ ಉದ್ದೇಶದಿಂದಲೇ ಆರೋಪಿಗಳು ಆಸ್ಪತ್ರೆಗೆ ಹೋಗಿದ್ದಾರೆ.
- ಐಪಿಸಿ 326 ಅನ್ವಯ ಗಾಯದ ಪ್ರಕರಣ ಇದಲ್ಲ. ಇದು ಕೊಲೆಗೆ ಯತ್ನ ಎಂಬುದು ಸ್ಪಷ್ಟವಾಗುತ್ತದೆ.
- ನಲಪಾಡ್ ಪ್ರಭಾವಿ ಎಂಬ ಕಾರಣಕ್ಕೆ ಫರ್ಜಿ ಕೆಫೆಯ ಸಿಬ್ಬಂದಿ ಜಗಳ ಬಿಡಿಸಲು ಹೋಗಿಲ್ಲ.
- ಶಾಸಕರ ಮಗನೆಂಬ ಕಾರಣಕ್ಕೆ ಕ್ಷಮೆ ಕೇಳುವಂತೆ ಒತ್ತಾಯಿಸಿ ಹಲ್ಲೆ ಮಾಡಲಾಗಿದೆ.
- ಕಾಂಗ್ರೆಸ್ ಯುವ ಮುಖಂಡರಾಗಿ ಹಲವೆಡೆ ಭಾಷಣ ಮಾಡಿರುವ ನಲಪಾಡ್‌ಗೆ ಹಲ್ಲೆಯ ತೀವ್ರತೆ ತಿಳಿಯದ್ದೇನಲ್ಲ.
- ಇದು ಮಾಮೂಲಿ ಜಗಳವಲ್ಲ. ಪ್ರಭಾವಿ ಎಂಬ ಹಮ್ಮಿನಲ್ಲಿ ನಡೆದದ್ದು. ಬಲದ ಮದದಲ್ಲಿ ನಡೆವ ಇಂಥ ಅಪರಾಧ ಕೃತ್ಯಗಳು ನಾಗರಿಕ ಹಕ್ಕುಗಳನ್ನು ಪ್ರಶ್ನಿಸುತ್ತವೆ.
- ಎರಡ್ಮೂರು ನಿಮಿಷಗಳಲ್ಲಿ ಈ ಘಟನೆ ನಡೆದಿದೆ ಎಂದು ಆರೋಪಿ ಪರ ವಕೀಲರು ಹೇಳುತ್ತಾರೆ. ಅಷ್ಟು ಕಡಿಮೆ ಸಮಯದಲ್ಲಿ ಇಂಥ ಭಯಾನಕ ಹಲ್ಲೆ ನಡೆಯಲು ಸಾಧ್ಯವೇ?
- ವಿದ್ವತ್ ಮೂಗು, ಎದೆ ಗೂಡು, ಪಕ್ಕೆಲುಬು, ಹೊಟ್ಟೆ, ತಲೆಗೆ ಗಾಯಗಳಾಗಿವೆ
- ಅವರ ಮುಖವೇ ಬದಲಾಗಿದೆ. ಅದು ಮೊದಲಿನಂತೆ ಆಗಲು ಸಾಧ್ಯವೇ ಇಲ್ಲ
- ವಿದ್ವತ್ ವಾರ್ಡ್‌ಗೆ ವರ್ಗಾಯಿಸಿದರೂ ಆರೋಗ್ಯ ಸುಧಾರಿಸಿಲ್ಲ. ಪೊಲೀಸರಿಗೆ ಹೇಳಿಕೆ ಕೊಡುವ ಸ್ಥಿತಿಯಲ್ಲೂ ಅವರಿಲ್ಲ.
- ವಿದ್ವತ್ ಸಂಪೂರ್ಣವಾಗಿ ಗುಣಮುಖವಾಗಬೇಕಾದರೆ ಎಂಟು ತಿಂಗಳು ಆಸ್ಪತ್ರೆಯಲ್ಲಿ ಇರಬೇಕಾಗಬಹುದು
- ಫರ್ಜಿ ಕೆಫೆ ಹಾಗೂ ಮಲ್ಯ ಆಸ್ಪತ್ರೆಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ನಲಪಾಡ್ ಮತ್ತು ಸಹಚರರು ಇರುವ ದೃಶ್ಯ ಸೆರೆಯಾಗಿದೆ
- ಕ್ಯಾಮೆರಾದಲ್ಲಿ ಸ್ಪಷ್ಟವಾಗಿ ಕಂಡವರನ್ನಷ್ಟೇ ಬಂಧಿಸಲಾಗಿದೆ. ಅಸ್ಪಷ್ಟವಾಗಿ ಕಂಡವರನ್ನು ಪತ್ತೆ ಹಚ್ಚಿ ಬಂಧಿಸಬೇಕಿದೆ.
- ‘ನಾನೊಬ್ಬ ರಾಜ, ನನ್ನನ್ನು ತಡೆಯುವವರೂ ಯಾರು ಇಲ್ಲ’ ಎಂಬಂತೆ ನಲಪಾಡ್ ವರ್ತಿಸಿದ್ದಾನೆ
- ಆತನಿಗೆ ಜಾಮೀನು ನೀಡಿದರೆ ವಿದ್ವತ್‌ಗೆ ಪ್ರಾಣ ಭೀತಿ ಎದುರಾಗುತ್ತದೆ.
- ಕೊಲೆಯ ಉದ್ದೇಶ ಇಟ್ಟುಕೊಂಡೇ ಆರೋಪಿಗಳು ಆಸ್ಪತ್ರೆಯವರೆಗೂ ವಿದ್ವತ್ ಅವರನ್ನು ಹಿಂಬಾಲಿಸಿದ್ದಾರೆ.
- ಜಾಮೀನು ಪಡೆದು ಆತ ಜೈಲಿನಿಂದ ಹೊರಬಂದರೆ ಏನು ಬೇಕಾದರೂ ಆಗಬಹುದು
- ಎಂಟೇ ದಿನಕ್ಕೆ ಜಾಮೀನು ಕೇಳಿದರೆ ಹೇಗೆ?
- ಪ್ರಕರಣದ ತನಿಖೆ ಆರಂಭಿಕ ಹಂತದಲ್ಲಿದೆ
- ಮತ್ತೊಬ್ಬ ಆರೋಪಿ ಶ್ರೀಕೃಷ್ಣ ಇನ್ನೂ ಸಿಕ್ಕಿಲ್ಲ. ಆತ ಸಾಕ್ಷ್ಯ ನಾಶ ಮಾಡುತ್ತಿರಬಹುದು?
- ಆರೋಪಿಗಳು ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬರುವವರೆಗೂ ಜಾಮೀನು ನೀಡಬಾರದು

‘ಗೂಂಡಾ ಕಾಯ್ದೆಯಡಿ ಬಂಧಿಸಿ’

ಮೊಹಮದ್ ನಲಪಾಡ್‌ನನ್ನು ಗೂಂಡಾ ಕಾಯ್ದೆಯಡಿ ಬಂಧಿಸಬೇಕು ಎಂದು ಒತ್ತಾಯಿಸಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಕಾರ್ಯಕರ್ತರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ವೇದಿಕೆ ಅಧ್ಯಕ್ಷ ರಮೇಶ್‌ಗೌಡ, ‘ಆತನಲ್ಲಿ ಸಮಾಜಘಾತುಕ ಲಕ್ಷಣಗಳಿವೆ. ಅದಕ್ಕೆ ವಿದ್ವತ್ ಮೇಲೆ ಭೀಕರವಾಗಿ ಹಲ್ಲೆ ಮಾಡಿರುವುದೇ ಸಾಕ್ಷಿ. ನ್ಯಾಯಾಲಯದಲ್ಲಿ ವಕೀಲರನ್ನೂ ಗುರಾಯಿಸಿ ನೋಡಿದ್ದಾನೆ’ ಎಂದರು.

ಕೊಳೆತ ಆಹಾರ ನೀಡುತ್ತಿದ್ದ ಆರೋಪದಡಿ ಫರ್ಜಿ ಕೆಫೆಗೆ ₹ 50 ಸಾವಿರ ದಂಡ ವಿಧಿಸಲಾಗಿತ್ತು. ವಿದ್ವತ್ ಮೇಲೆ ಹಲ್ಲೆ ತಡೆಗಟ್ಟಲು ಕೆಫೆ ಸಿಬ್ಬಂದಿ ಮುಂದಾಗಿಲ್ಲ. ಅವರು ತನಿಖೆಗೂ ಸಹಕರಿಸುತ್ತಿಲ್ಲ. ಈ ಅಂಶಗಳನ್ನು ಪರಿಗಣಿಸಿ ಕೆಫೆಯ ಪರವಾನಗಿಯನ್ನು ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು.

ಹ್ಯಾರಿಸ್ ಬೆಂಬಲಿಗರ ವಿರುದ್ಧ ಪ್ರತಿಭಟನೆ: ‘ಶಾಸಕ ಎನ್.ಎ.ಹ್ಯಾರಿಸ್ ಬೆಂಬಲಿಗರಾದ ದೀಪಾ ಮತ್ತು ವಿಜಯಾ ಎಂಬುವರು ಚಿಟ್ ಫಂಡ್ ಹೆಸರಿನಲ್ಲಿ ಬಡವರಿಗೆ ಕೋಟ್ಯಂತರ ರೂಪಾಯಿ ವಂಚಿಸಿದ್ದಾರೆ’ ಎಂದು ಆರೋಪಿಸಿ ರಾಜ್ಯ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸಮಿತಿಯ ಸಂಚಾಲಕ ಎನ್.ಶಂಕರ್, ‘ಹಣ ದ್ವಿಗುಣ ಮಾಡಿಕೊಡುವ ನೆಪದಲ್ಲಿ ದೀಪಾ ಹಾಗೂ ವಿಜಯಾ ಅವರು ಶಾಂತಿನಗರ ವಿಧಾನಸಭಾ ಕ್ಷೇತ್ರದ ಗೌತಮಪುರ, ಆಸ್ಟಿನ್‌ಟೌನ್, ಹಲಸೂರು, ಮರ್ಫಿಟೌನ್, ಎಂ.ವಿ.ಗಾರ್ಡನ್ ಹಾಗೂ ಫ್ರೇಜರ್‌ಟೌನ್‌ನ ಬಡ ಜನರಿಂದ ಕೋಟ್ಯಂತರ ರೂಪಾಯಿ ಸಂಗ್ರಹಿಸಿದ್ದಾರೆ. ಹಣ ಕೇಳಿದವರ ಮೇಲೆ ಹ್ಯಾರಿಸ್ ಪ್ರಭಾವ ಬಳಸಿ ದೌರ್ಜನ್ಯ ಎಸಗುತ್ತಿದ್ದಾರೆ’ ಎಂದರು.

‘ನಲಪಾಡ್ ಶಸ್ತ್ರಾಸ್ತ್ರ ಹೊಂದಿರುವ ಬಗ್ಗೆ ತನಿಖೆ’

ಬೆಂಗಳೂರು: ಮೊಹಮದ್ ನಲಪಾಡ್ ಆರೇಳು ರಿವಾಲ್ವರ್‌ಗಳನ್ನು ಹೊಂದಿರುವ ಬಗ್ಗೆ ತನಿಖೆ ನಡೆಸುವಂತೆ ಪೊಲೀಸ್ ಕಮಿಷನರ್‌ಗೆ ಸೂಚಿಸುವುದಾಗಿ ಗೃಹ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ನಲಪಾಡ್‌ನನ್ನು ಬಂಧಿಸಿದಾಗ ಅವರ ಬಳಿ ಅಥವಾ ಮನೆಯಲ್ಲಿ ಶಸ್ತ್ರಾಸ್ತ್ರ ಇರಲಿಲ್ಲ. ಆರೇಳು ರಿವಾಲ್ವರ್‌ಗಳ ಜತೆ ಅವರು ತೆಗೆಸಿಕೊಂಡಿದ್ದಾರೆ ಎನ್ನಲಾದ ಫೋಟೊಗಳು ಫೇಸ್‌ಬುಕ್, ವಾಟ್ಸ್‌ಆ್ಯಪ್‌ಗಳಲ್ಲಿ ಓಡಾಡುತ್ತಿವೆ. ಅವರ ಬಳಿ ಪರವಾನಗಿ ಇರಲಿಲ್ಲ. ಹಾಗಿದ್ದರೂ ಶಸ್ತ್ರಾಸ್ತ್ರ ಇಟ್ಟುಕೊಂಡಿದ್ದರೆ ತಪ್ಪು’ ಎಂದೂ ಹೇಳಿದರು.

ಹ್ಯಾರಿಸ್ ರಿವಾಲ್ವರ್ ಪರವಾನಗಿ ಪಡೆದಿದ್ದರು. ಆದರೆ, ಅವರ ಬಳಿ ರಿವಾಲ್ವರ್ ಇರಲಿಲ್ಲ ಎಂದೂ ರೆಡ್ಡಿ ಹೇಳಿದರು.

‘ನಲಪಾಡ್ ಮಾಧ್ಯಮದವರ ಮೇಲೆ ಹಲ್ಲೆ ನಡೆಸಿದ್ದರು. ತಮ್ಮನ್ನು ಪ್ರಶ್ನಿಸಿದವರ ಮೇಲೂ ಹಲ್ಲೆ ನಡೆಸಿದ್ದರು. ಅವರನ್ನು ರೌಡಿಶೀಟರ್ ಎಂದು ಪರಿಗಣಿಸಲು ಹಿಂದೇಟು ಏಕೆ’ ಎಂಬ ಪ್ರಶ್ನೆಗೆ, ‘ಈ ಹಿಂದೆ ನಲಪಾಡ್ ವಿರುದ್ಧ ಯಾರೂ ದೂರು ದಾಖಲಿಸಿರಲಿಲ್ಲ. ದೂರು ದಾಖಲಿಸಿದ್ದರೆ ಕ್ರಮ ಕೈಗೊಳ್ಳುತ್ತಿದ್ದೆವು. ಯಾರ ಮೇಲೆ ರೌಡಿ ಶೀಟ್ ಹಾಕಬೇಕು ಎಂಬುದನ್ನು ಪೊಲೀಸರು ನಿರ್ಧರಿಸುತ್ತಾರೆ. ನಾನು ಅಧಿಕಾರ ವಹಿಸಿಕೊಂಡ ದಿನವೇ ಗೂಂಡಾ ಕಾಯ್ದೆ, ರೌಡಿಶೀಟ್ ಹಾಗೂ ಗಡಿಪಾರು ಮಾಡುವ ತೀರ್ಮಾನದ ವಿಷಯದಲ್ಲಿ ಮುಕ್ತ ತೀರ್ಮಾನ ತೆಗೆದುಕೊಳ್ಳಿ ಎಂದು ಪೊಲೀಸರಿಗೆ ಸೂಚಿಸಿದ್ದೇನೆ’ ಎಂದರು.

‘ನಲಪಾಡ್ ಬೆದರಿಕೆ ಹಾಕಿದ್ದ, ಪೊಲೀಸರು ದೂರು ಸ್ವೀಕರಿಸಲಿಲ್ಲ ಎಂದು ಪೂರ್ಣಿಮಾ ಎಂಬ ಮಹಿಳೆ ಫೇಸ್‌ಬುಕ್‌ನಲ್ಲಿ ವಿಡಿಯೊ ಹಾಕಿದ್ದಾರಲ್ಲ’ ಎಂಬ ಮತ್ತೊಂದು ಪ್ರಶ್ನೆಗೆ, ‘ಅವರು ದೂರು ಕೊಡಲು ಹೋದಾಗ ನಾನು ಗೃಹ ಸಚಿವನಲ್ಲ. ನಾನು ಪ್ರತಿನಿಧಿಸುವ ಬಿಟಿಎಂ ಲೇಔಟ್ ಮತ ಕ್ಷೇತ್ರದಲ್ಲಿ ಅವರು ವಾಸಿಸುತ್ತಿದ್ದಾರೆ. ನನ್ನನ್ನು ಭೇಟಿ ಮಾಡಿ ದೂರು ಸಲ್ಲಿಸಲು ಈಗಲೂ ಅವಕಾಶವಿದೆ. ಅವರು ಮೊದಲು ದೂರು ಕೊಡಲಿ’ ಎಂದು ರೆಡ್ಡಿ ಹೇಳಿದರು.

ಬಿಜೆಪಿ ದ್ವಂದ್ವ ನಿಲುವು: ಕೊಲೆ, ರೌಡಿಸಂ ವಿಷಯದಲ್ಲಿ ಬಿಜೆಪಿಯವರು ದ್ವಂದ್ವ ನಿಲುವು ತಾಳುತ್ತಿದ್ದಾರೆ. ಕಾಂಗ್ರೆಸ್‌ನವರ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ರೆಡ್ಡಿ ಟೀಕಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಆಪ್ತ ಸಹಾಯಕ ಸಂತೋಷ್, ಅದೇ ಪಕ್ಷಕ್ಕೆ ಸೇರಿರುವ ಕೆ.ಎಸ್. ಈಶ್ವರಪ್ಪನವರ ಆಪ್ತ ಸಹಾಯಕ ವಿನಯ್ ಅವರನ್ನು ಅಪಹರಿಸಲು ಗೂಂಡಾಗಳನ್ನು ಬಿಟ್ಟಿದ್ದರು. ವಿನಯ್ ಮೇಲೆ ಹಲ್ಲೆ ಮಾಡಿಸಿದ್ದರು. ಹ್ಯಾರಿಸ್ ಪುತ್ರ ಪ್ರಕರಣದಲ್ಲಿ ದೊಡ್ಡ ಗಂಟಲಿನಲ್ಲಿ ಮಾತನಾಡುವ ಬಿಜೆಪಿ ನಾಯಕರು ಸಂತೋಷ್ ಬಗ್ಗೆ ಏಕೆ ಚಕಾರ ಎತ್ತುವುದಿಲ್ಲ ಎಂದು ಅವರು ಪ್ರಶ್ನಿಸಿದರು.

ವಿನಯ್ ಮೇಲೆ ಹಲ್ಲೆ ನಡೆಸಿದ ಸಂತೋಷ್‌ಗೆ ಬಿಜೆಪಿ ಕಾರ್ಯಕಾರಿ ಸಮಿತಿಯಲ್ಲಿ ಸ್ಥಾನ ನೀಡಲಾಗಿದೆ. ಯಡಿಯೂರಪ್ಪ, ಶೋಭಾ ಕರಂದ್ಲಾಜೆ ಆತನನ್ನು ಜತೆಯಲ್ಲಿರಿಸಿಕೊಂಡು ಓಡಾಡುತ್ತಾರೆ ಎಂದರು.

ಗೋವಿಂದಗೌಡ ಕೊಲೆ, ಮಾಜಿ ಮೇಯರ್ ಸತ್ಯನಾರಾಯಣ ಬೆಂಬಲಿಗರಿಂದ ಹಲ್ಲೆ, ಕಾರ್ಪೊರೇಟರ್ ಶಿಲ್ಪಾ ಪತಿ ಶ್ರೀಧರ್ ಗುತ್ತಿಗೆದಾರನ ಮೇಲೆ ನಡೆಸಿದ ಹಲ್ಲೆ ನಡೆಸಿದ್ದಾರೆ. ಈ ಯಾವ ವಿಷಯದ ಬಗ್ಗೆಯೂ ಬಿಜೆಪಿಯವರು ಟೀಕಿಸುವುದಿಲ್ಲ. ಕೊಲೆ ಮೊಕದ್ದಮೆ ಎದುರಿಸುತ್ತಿರುವ ಯೋಗಿ ಆದಿತ್ಯನಾಥ್ ಅವರನ್ನು ಮುಖ್ಯಮಂತ್ರಿ ಮಾಡಿರುವ ಅವರಿಗೆ ಕಾಂಗ್ರೆಸ್‌ನವರನ್ನು ಟೀಕಿಸುವ ಹಕ್ಕಿಲ್ಲ ಎಂದರು.

ಮಿಷನ್ 150 ನಮ್ಮದಾಗಿದೆ: ರೆಡ್ಡಿ

‘ಮಿಷನ್ 150 ಈಗ ನಮ್ಮದಾಗಿದೆ’ ಎಂದು ಸಚಿವ ರೆಡ್ಡಿ ಹೇಳಿದರು.

‘ಪುದುಚೇರಿ, ಕರ್ನಾಟಕ ಬಿಟ್ಟು ಉಳಿದೆಲ್ಲೂ ಕಾಂಗ್ರೆಸ್ ಇಲ್ಲ’ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಕಾಂಗ್ರೆಸ್ ಅಧಿಕಾರದಲ್ಲಿರುವ ಪಂಜಾಬ್ ದೇಶದಲ್ಲಿಯೇ ಇಲ್ಲ ಎಂದು ಮೋದಿ ಅಂದುಕೊಂಡಿರಬೇಕು. ಕರ್ನಾಟಕ ಮತ್ತು ರಾಜಸ್ಥಾನದಲ್ಲಿ ನಾವು ಅಧಿಕಾರಕ್ಕೆ ಬರಲಿದ್ದೇವೆ’ ಎಂದರು.

‘ಎಷ್ಟು ಸ್ಥಾನದಲ್ಲಿ ನೀವು ಗೆಲ್ಲುತ್ತೀರಿ’ ಎಂಬ ಪ್ರಶ್ನೆಗೆ, ‘150’ ಎಂದು ಅವರು ಪ್ರತಿಕ್ರಿಯಿಸಿದರು. ‘ಅದು ಬಿಜೆಪಿಯವರ ಗುರಿಯಲ್ಲವೇ’ ಎಂಬ ಮರು ಪ್ರಶ್ನೆಗೆ, ‘ಅದು ಈಗ ನಮ್ಮ ಗುರಿಯಾಗಿ ಬದಲಾಗಿದೆ’ ಎಂದರು.

ನಲಪಾಡ್ ಪ್ರಕರಣದಿಂದ ಮುಜುಗರ: ಪ್ರಕಾಶ್ ರೈ

ಮೈಸೂರು: ‘ಮೊಹಮ್ಮದ್ ನಲಪಾಡ್ ನನ್ನು ಹೊಗಳಿದ್ದು ಖಂಡಿತ ಈಗ ಮುಜುಗರ ಉಂಟು ಮಾಡಿದೆ. ಯಾರನ್ನಾದರೂ ಹೊಗಳುವ ಮುನ್ನ ಎಚ್ಚರ ವಹಿಸಬೇಕು. ಪೂರ್ವಾಪರ ತಿಳಿದು ಹೊಗಳಬೇಕು’ ಎಂದು ಪ್ರಕಾಶ್ ರೈ ಇಲ್ಲಿ ಸೋಮವಾರ ಹೇಳಿದರು.

‘ಎಲ್ಲಾ ಪಂಥದವರು ಒಂದೇ ಕಡೆ ಸೇರಿರುವುದು ಒಳ್ಳೆಯದು ಎಂದು ಅಂದಿನ ಕಾರ್ಯಕ್ರಮದಲ್ಲಿ ಹೇಳಿದ್ದೆ. ಒಂದು ಗ್ರಾಮವನ್ನು ದತ್ತು ತೆಗೆದುಕೊಳ್ಳಲು ಹ್ಯಾರಿಸ್ ಪುತ್ರ ನಲಪಾಡ್ ಹಣ ನೀಡಿದ್ದರು. ಹೀಗಾಗಿ, ಯುವಕರು ಇಂಥ ಗುಣ ಬೆಳೆಸಿಕೊಳ್ಳಬೇಕು ಎಂದು ಬೆನ್ನು ತಟ್ಟಿದ್ದೆ. ಆದರೆ, ಆತನ ಮನಸ್ಸಿನಲ್ಲಿ ರಾಕ್ಷಸನಿದ್ದಾನೆ ಎಂಬುದು ಗೊತ್ತಿರಲಿಲ್ಲ’ ಎಂದು ಅವರು ಮಾಧ್ಯಮ ಸಂವಾದದಲ್ಲಿ ತಿಳಿಸಿದರು.

ಹೇಳಿಕೆ ನೀಡಲು ಬಾಯಿ ನೋವು ಅಡ್ಡಿ

ಒಂದನೇ ಪುಟದಿಂದ...

ಘಟನೆ ನಡೆದ ಮರುದಿನವೇ ಕಬ್ಬನ್ ಪಾರ್ಕ್ ಪೊಲೀಸರು, ಕೆಫೆಗೆ ಹೋಗಿ ಡಿವಿಆರ್ ಕಲೆಹಾಕಿದ್ದರು. ಅದನ್ನೇ ಸಿಸಿಬಿ ಪೊಲೀಸರಿಗೆ ನೀಡಿದ್ದರು. ಅದರ ಪರಿಶೀಲನೆ ವೇಳೆ ಹಲ್ಲೆ ದೃಶ್ಯವಿಲ್ಲದಿರುವುದು ಗೊತ್ತಾಗಿದೆ. ಬಳಿಕವೇ ಪೊಲೀಸರು, ಕೆಫೆಗೆ ಹೋಗಿ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿದ್ದರು. ಸಿಬ್ಬಂದಿ, ಮುಚ್ಚಿಟ್ಟಿದ್ದ ಡಿವಿಆರ್ ಕೊಟ್ಟಿರುವುದಾಗಿ ಮೂಲಗಳು ತಿಳಿಸಿವೆ.

‘ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಪ್ರಮುಖ ಪುರಾವೆಗಳು. ಡಿವಿಆರ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದೇವೆ. ಡಿವಿಆರ್ ಮುಚ್ಚಿಟ್ಟಿದ್ದ ಆರೋಪದಡಿ ಕೆಫೆ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಚಿಂತನೆ ನಡೆಸಿದ್ದೇವೆ’ ಎಂದು ಪೊಲೀಸರು ತಿಳಿಸಿದರು.

ನಮೂನೆ ಸಂಖ್ಯೆ ಎನ್‌ಸಿಎಲ್‌ಟಿ 3ಎ
ಅರ್ಜಿ ವಿವರಣಾ ಜಾಹೀರಾತು
[ನಿಯಮ 35 ನೋಡಿ]
ಕಂಪನಿ ಅರ್ಜಿ ಸಂಖ್ಯೆ CP (CAA) NO. 14/BB/2018
ಅರ್ಜಿ ಸೂಚನೆ
ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠ, ಬೆಂಗಳೂರುರವರ ಸಮಕ್ಷಮ
ಕಂಪನಿಯ ಅಧಿನಿಯಮ 2013ರ ವಿಚಾರವಾಗಿ
ಮತ್ತು
ಕಂಪನಿಯ ಅಧಿನಿಯಮ 2013ರ ಸೆಕ್ಷನ್ 230 ರಿಂದ 232ರ ವಿಚಾರವಾಗಿ
ಮತ್ತು
ಇವುಗಳ ವಿಚಾರವಾಗಿ
ಡಿಜಿ ಟ್ರೇಡಿಂಗ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U17111KA2003PTC031614) ...ಅರ್ಜಿದಾರ ಕಂಪನಿ ಸಂಖ್ಯೆ 1 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 1
ಮತ್ತು
ಗ್ಲಾಡಿಯೇಟರ್ ಅಪೇರಲ್ಸ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U18101KA2004PTC034154) ...ಅರ್ಜಿದಾರ ಕಂಪನಿ ಸಂಖ್ಯೆ 2 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 2
ಮತ್ತು
ಮಿಡಿಸ್ ಟ್ರೇಡಿಂಗ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U17111KA2003PTC031643) ...ಅರ್ಜಿದಾರ ಕಂಪನಿ ಸಂಖ್ಯೆ 3 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 3
ಮತ್ತು
ಮಂಜೂಷಾ ಟ್ರೇಡಿಂಗ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U17111KA2003PTC031645) ...ಅರ್ಜಿದಾರ ಕಂಪನಿ ಸಂಖ್ಯೆ 4 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 4
ಮತ್ತು
ರಾಫ್ಲರ್ ಟ್ರೇಡಿಂಗ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U17111KA2003PTC031681) ...ಅರ್ಜಿದಾರ ಕಂಪನಿ ಸಂಖ್ಯೆ 5 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 5
ಮತ್ತು
ರಾಜ್‌ದಿನ್ ಅಪೇರಲ್ಸ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U18101KA2004PTC033904) ...ಅರ್ಜಿದಾರ ಕಂಪನಿ ಸಂಖ್ಯೆ 6 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 6
ಮತ್ತು
ರಿಫ್ಲೆಕ್ಷನ್ಸ್ ಟ್ರೇಡಿಂಗ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U17111KA2003PTC031680) ...ಅರ್ಜಿದಾರ ಕಂಪನಿ ಸಂಖ್ಯೆ 7 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 7
ಮತ್ತು
ರಿಷಿಕ್ ಅಪೇರಲ್ಸ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U18101KA2004PTC033760) ...ಅರ್ಜಿದಾರ ಕಂಪನಿ ಸಂಖ್ಯೆ 8 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 8
ಮತ್ತು
ಸೆವೆನ್ ಹಿಲ್ಸ್ ಕ್ಲಾತಿಂಗ್ ಪ್ರೈವೇಟ್ ಲಿಮಿಟೆಡ್
(ಸಿಐಎನ್: U18101KA2004PTC034162) ...ಅರ್ಜಿದಾರ ಕಂಪನಿ ಸಂಖ್ಯೆ 9 / ಟ್ರಾನ್ಸ್‌ಫರ್ ಕಂಪನಿ ಸಂಖ್ಯೆ 9
[illegible]
ಮತ್ತು
ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್
(ಸಿಐಎನ್: L18101KA2004PLC033475) ...ಅರ್ಜಿದಾರ ಕಂಪನಿ ಸಂಖ್ಯೆ 10 / ಟ್ರಾನ್ಸ್‌ಫರೀ ಕಂಪನಿ
[illegible]

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ...ಅರ್ಜಿದಾರ ಕಂಪನಿ
[illegible]
ಬೆಂಗಳೂರು–560025

[illegible]

ಸಹಿ/-
ಶ್ರೀ ವಿ. ಶ್ರೀಧರನ್, ಅರ್ಜಿದಾರರ ಅಧಿಕೃತ ಪ್ರತಿನಿಧಿ,
[illegible]
ಬೆಂಗಳೂರು – 560 027
ಬೆಂಗಳೂರು
ದಿನಾಂಕ : 26ನೇ ಫೆಬ್ರುವರಿ, 2018

ತನಿಖೆ ಸಿಐಡಿಗೆ ವರ್ಗಾವಣೆ

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರ್ ಕುಮಾರ್ ಅಜಿತಾಬ್ ನಾಪತ್ತೆ ಪ್ರಕರಣದ ತನಿಖೆಯನ್ನು ಅಪರಾಧ ತನಿಖಾ ದಳಕ್ಕೆ (ಸಿಐಡಿ) ವರ್ಗಾವಣೆ ಮಾಡಲು ಹೈಕೋರ್ಟ್ ಅನುಮತಿ ನೀಡಿದೆ.

‘ತನಿಖೆಯನ್ನು ವಿಶೇಷ ತನಿಖಾ ದಳದಿಂದ (ಎಸ್‌ಐಟಿ) ಸಿಐಡಿಗೆ ವರ್ಗಾಯಿಸಲು ಅನುಮತಿ ನೀಡಬೇಕು’ ಎಂದು ಕೋರಿ ನಗರ ಪೊಲೀಸ್ ಕಮಿಷನರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ವಿನೀತ್ ಕೊಠಾರಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮಾನ್ಯ ಮಾಡಿದೆ.

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎ.ಜಿ.ಶಿವಣ್ಣ, ‘ಕ್ರಿಮಿನಲ್ ಪ್ರಕರಣಗಳ ತನಿಖೆಗಳಿಗಾಗಿಯೇ ಸಿಐಡಿ ರಚಿಸಲಾಗಿದೆ. ಹಾಗಾಗಿ ಅಜಿತಾಬ್ ಪ್ರಕರಣವನ್ನೂ ಸಿಐಡಿಗೆ ವಹಿಸಲು ನಗರ ಪೊಲೀಸರು ಕಮಿಷನರ್ ನಿರ್ಧರಿಸಿದ್ದಾರೆ. ಅಂತೆಯೇ ಮುಂಬರುವ ವಿಧಾನಸಭೆ ಚುನಾವಣೆಯ ಕಾರ್ಯ ನಿರ್ವಹಣೆಗೂ ಪೊಲೀಸರು ಬೇಕಾಗಿದ್ದಾರೆ. ಹೀಗಾಗಿ ಸಿಐಡಿಗೆ ಪ್ರಕರಣ ವರ್ಗಾಯಿಸಲು ಅನುಮತಿ ನೀಡಬೇಕು’ ಎಂದು ಕೋರಿದರು.

ಇದನ್ನು ಪುರಸ್ಕರಿಸಿದ ನ್ಯಾಯಪೀಠ ತನಿಖೆಯ ಪ್ರಗತಿಯನ್ನು ಮಾರ್ಚ್ 12ರಂದು ಕೋರ್ಟ್‌ಗೆ ಹಾಜರು ಪಡಿಸುವಂತೆ ನಿರ್ದೇಶಿಸಿದೆ.

ಪ್ರಕರಣವೇನು?: ಬ್ರಿಟಿಷ್ ಟೆಲಿಕಾಂ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ಕುಮಾರ್ ಅಜಿತಾಬ್ 2017ರ ಡಿಸೆಂಬರ್ 18ರ ಸಂಜೆ6.30ಕ್ಕೆ ನಾಪತ್ತೆಯಾಗಿದ್ದರು. ಈ ಬಗ್ಗೆ ಕುಮಾರ್ ತಂದೆ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆದರೆ ಪೊಲೀಸ್ ತನಿಖೆಯಲ್ಲಿ ಪ್ರಗತಿ ಕಾಣದ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿದ್ದಾರೆ.



ಇವಿಎಂ ಪರಿಶೀಲನೆ ಸಾರ್ವತ್ರಿಕ ಚುನಾವಣೆಗಾಗಿ 4,000 ಎಲೆಕ್ಟ್ರಾನಿಕ್ ಮತಯಂತ್ರಗಳನ್ನು ಕಂದಾಯ ಭವನದ ಸ್ಟ್ರಾಂಗ್ ರೂಂನಲ್ಲಿ ಸೋಮವಾರ ಇಡಲಾಯಿತು. ಇಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆ ಹಾಗೂ ಪೊಲೀಸರನ್ನು ನಿಯೋಜಿಸಲಾಗಿದೆ. ಇನ್ನೂ 3,000 ಯಂತ್ರಗಳು ಮಂಗಳವಾರ ಬರಲಿವೆ. ನಗರ ಜಿಲ್ಲಾಧಿಕಾರಿ ವಿ.ಶಂಕರ್ ವೀಕ್ಷಿಸಿದರು

ತಂದೆ ಮೇಲಿನ ದ್ವೇಷಕ್ಕೆ ಮಗಳ ಮೇಲೆ ಅತ್ಯಾಚಾರ

ಬೆಂಗಳೂರು: ತಂದೆ ಮೇಲಿನ ದ್ವೇಷದಿಂದಾಗಿ ಮಗಳ ಮೇಲೆ ಅತ್ಯಾಚಾರ ಎಸಗಿದ್ದ ಆರೋಪದಡಿ ಅನಿಲ್ ಕುಮಾರ್ (28) ಎಂಬಾತನನ್ನು ಆರ್.ಎಂ.ಸಿ ಯಾರ್ಡ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಆರೋಪಿಯು ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಮಾರುಕಟ್ಟೆಯಲ್ಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿದ್ದ. ಸಂತ್ರಸ್ತೆಯ ತಂದೆಯು ಕಾರ್ಮಿಕರಾಗಿದ್ದರಿಂದ ಅವರಿಬ್ಬರ ನಡುವೆ ಪರಿಚಯವಾಗಿತ್ತು. ಬಾಲಕಿಯ ಮನೆಗೂ ಆಗಾಗ ಬಂದು ಹೋಗುತ್ತಿದ್ದ. ಅದೇ ವೇಳೆ ಬಾಲಕಿಯನ್ನೂ ಪರಿಚಯ ಸಿಕೊಂಡಿದ್ದ ಎಂದು ಪೊಲೀಸರು ತಿಳಿಸಿದರು.

ಚಾಕಲೇಟ್ ಕೊಡಿಸುವುದಾಗಿ ಇತ್ತೀಚೆಗೆ ಬಾಲಕಿಯನ್ನು ತನ್ನ ಬಳಿ ಕರೆಸಿಕೊಂಡಿದ್ದ ಅನಿಲ್‌ಕುಮಾರ್, ಮಾರುಕಟ್ಟೆಯಲ್ಲಿ ಲಾರಿ ನಿಲ್ಲಿಸುವ ಜಾಗಕ್ಕೆ ಆಕೆಯನ್ನು ಕರೆದೊಯ್ದಿದ್ದ. ಬಳಿಕ, ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ.

ಕೃತ್ಯದ ಬಳಿಕ ಮನೆಗೆ ಹೋಗಿದ್ದ ಬಾಲಕಿಯು ಹೊಟ್ಟೆನೋವಿನಿಂದ ಬಳಲುತ್ತಿದ್ದಳು. ಪೋಷಕರು ಕಾರಣ ಕೇಳಿದಾಗ, ಅತ್ಯಾಚಾರದ ವಿಷಯ ತಿಳಿಸಿದ್ದಳು. ಬಳಿಕವೇ ಪೋಷಕರು ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದೆವು ಎಂದು ಪೊಲೀಸರು ವಿವರಿಸಿದರು.

‘ಬಾಲಕಿಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಹೇಳಿಕೆ ಪಡೆದಿದ್ದೇವೆ. ಬಾಲಕಿಯ ತಂದೆ ಹಾಗೂ ಆರೋಪಿಯ ನಡುವೆ ಹಣಕಾಸಿನ ವ್ಯವಹಾರವಿತ್ತು. ಅದೇ ಕಾರಣಕ್ಕೆ ಅವರಿಬ್ಬರ ನಡುವೆ ಇತ್ತೀಚೆಗೆ ಜಗಳ ಆಗಿತ್ತು. ಅದೇ ದ್ವೇಷದಲ್ಲಿ ಈ ಕೃತ್ಯ ಎಸಗಿದ್ದಾನೆ ಎಂಬುದು ಗೊತ್ತಾಗಿದೆ’ ಎಂದರು.

ಕುಡಿದ ಮತ್ತಿನಲ್ಲಿ ಜಗಳ– ಕೊಲೆಯಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಸಮೀಪದ ತಿಪ್ಪೇನಹಳ್ಳಿಯಲ್ಲಿ ಕುಡಿದ ಮತ್ತಿನಲ್ಲಿ ಸ್ನೇಹಿತರ ನಡುವೆ ಆರಂಭವಾದ ಜಗಳವು ಸಂತೋಷ್ (28) ಎಂಬುವರ ಕೊಲೆಯಲ್ಲಿ ಅಂತ್ಯವಾಗಿದೆ.

ದೊಡ್ಡಬಿದರಕಲ್ಲು ಸಮೀಪದ ಸುವರ್ಣನಗರದ ನಿವಾಸಿಯಾಗಿದ್ದ ಅವರು, ಕಾರು ಚಾಲಕರಾಗಿದ್ದರು. ಅವರ ಸ್ನೇಹಿತ ಬಿ.ಪಿ. ರಂಗನಾಥ್ ಎಂಬಾತ ಕೊಲೆ ಮಾಡಿರುವ ಅನುಮಾನವಿದ್ದು, ತಲೆಮರೆಸಿಕೊಂಡಿದ್ದಾನೆ.

ಸ್ನೇಹಿತರಾದ ನರೇಶ್, ನಾಗರಾಜು ಹಾಗೂ ರಂಗನಾಥ್ ಜತೆಗೆ ಸಂತೋಷ್, ತಿಪ್ಪೇನಹಳ್ಳಿಯ ಬಾರೊಂದಕ್ಕೆ ಭಾನುವಾರ ರಾತ್ರಿ ಹೋಗಿದ್ದರು. ಮದ್ಯ ಕುಡಿಯುತ್ತಿದ್ದ ವೇಳೆಯಲ್ಲೇ ರಂಗನಾಥ್ ಜಗಳ ತೆಗೆದಿದ್ದ. ಬಾರ್ ಸಿಬ್ಬಂದಿ ಜಗಳ ಬಿಡಿಸಿ ಎಲ್ಲರನ್ನೂ ಹೊರಗೆ ಕಳುಹಿಸಿದ್ದರು. ಹೊರಬಂದ ಬಳಿಕವೂ ಜಗಳ ಮುಂದುವರಿದಿತ್ತು.

ಸಂತೋಷ್ ಮೇಲೆ ರಂಗನಾಥ್ ಹಲ್ಲೆ ನಡೆಸಿದ್ದ, ಕುಸಿದು ಬೀಳುತ್ತಿದ್ದಂತೆ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಪರಾರಿಯಾಗಿದ್ದ. ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೀಣ್ಯ ಪೊಲೀಸರು ತಿಳಿಸಿದರು.

‘ಸ್ನೇಹಿತರಾದ ನರೇಶ್ ಹಾಗೂ ನಾಗರಾಜ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದೇವೆ. ರಂಗನಾಥ್ ಸಿಕ್ಕ ಬಳಿಕ ಮತ್ತಷ್ಟು ಮಾಹಿತಿ ಸಿಗಲಿದೆ’ ಎಂದು ಹೇಳಿದರು.

ಗೂಡ್ಸ್ ವಾಹನಕ್ಕೆ ಬೈಕ್ ಗುದ್ದಿ ಟೆಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಡಿವಾಳ ಸಮೀಪದ ಗಾರ್ವೆಪಾಳ್ಯದಲ್ಲಿ ಗೂಡ್ಸ್ ವಾಹನಕ್ಕೆ ಬೈಕ್ ಗುದ್ದಿದ್ದರಿಂದ ಸವಾರ ಸಾಗರ್ ಪ್ರಭಾಕರ್ ಶೆಟ್ಟಿ (25) ಎಂಬುವರು ಮೃತಪಟ್ಟಿದ್ದಾರೆ.

ಕಾರ್ಕಳದ ಅವರು ಬೊಮ್ಮನಹಳ್ಳಿಯ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಹೊಸಪಾಳ್ಯದಲ್ಲಿ ವಾಸವಿದ್ದರು. ಭಾನುವಾರ ರಾತ್ರಿ 1.15 ಗಂಟೆ ಸುಮಾರಿಗೆ ಬೊಮ್ಮನಹಳ್ಳಿಯಲ್ಲಿರುವ ಸ್ನೇಹಿತನ ಮನೆಗೆ ಬೈಕ್‌ನಲ್ಲಿ ಹೊರಟಿದ್ದರು. ಅದೇ ವೇಳೆ ರಸ್ತೆ ಮಧ್ಯೆ ನಿಂತಿದ್ದ ವಾಹನಕ್ಕೆ ಬೈಕ್ ಡಿಕ್ಕಿ ಹೊಡೆದಿತ್ತು ಎಂದು ಮಡಿವಾಳ ಸಂಚಾರ ಪೊಲೀಸರು ತಿಳಿಸಿದರು.

ಬೈಕ್‌ನಿಂದ ಬಿದ್ದ ಸಾಗರ್ ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ರಸ್ತೆಯಲ್ಲಿ ನರಳುತ್ತಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಮಾರ್ಗಮಧ್ಯೆಯೇ ಅಸುನೀಗಿದರು ಎಂದರು.